

# ತೆನಾಲಿರಾಮನ ವಿವೇಕ

ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿ ವಿಖ್ಯಾತಿಯನ್ನು ಪಡೆದ ಅಷ್ಟದಿಗ್ಗಜರಲ್ಲಿ ವಿಕಟಕವಿ ತೆನಾಲಿ ರಾಮಕೃಷ್ಣ ಕೂಡಾ ಒಬ್ಬನಾಗಿದ್ದ. ಆದರೆ ಆತ ಚಕ್ರವರ್ತಿಯವರಿಗೆ ಪರಮಾಪ್ತನಾಗಿ ವಿಶೇಷ ಸಲಹೆಗಾರ ಕೂಡಾ ಆಗಿದ್ದನು. ರಾಮಕೃಷ್ಣನು ತನ್ನ ಸಮಯೋಚಿತವಾದ ಹಾಸ್ಯಪ್ರಜ್ಞೆಯಿಂದ ರಾಯರನ್ನು ಮುದಗೊಳಿಸುವುದಲ್ಲದೆ ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನೂ ಕೊಡುತ್ತಿದ್ದನು. ಆದರೆ ಅದು ಉಳಿದ ಅಷ್ಟದಿಗ್ಗಜರಿಗೆ ಮಾತ್ಸರ್ಯವನ್ನು ತಂದಿತ್ತು.

ಅದೊಂದು ದಿನ ಆಸ್ಥಾನದಲ್ಲಿ ರಾಜ್ಯದಲ್ಲಿರುವ ಬರದ ಬಗ್ಗೆ ಚರ್ಚಿಸುತ್ತಿರುವಾಗ ತೆನಾಲಿರಾಮನೂ ಸಲಹೆಯನ್ನು ನೀಡಿದ. ಅದನ್ನು ಸಹಿಸದ ಅಷ್ಟದಿಗ್ಗಜರು ಅಂದು ಸಂಜೆ ಉಪ್ಪರಿಗೆಯಲ್ಲಿರುವ ರಾಜನನ್ನು ಕಂಡು 'ಮಹಾಸ್ವಾಮಿ, ವಿಕಟಕವಿಯಾಗಿರುವ ರಾಮಕೃಷ್ಣನಿಗೆ ನಮ್ಮಷ್ಟು ವಿವೇಕವಿಲ್ಲ. ಆದರೂ ಆತ ರಾಜ್ಯಾಡಳಿತದ ವಿಷಯದಲ್ಲಿ ಅನಗತ್ಯವಾಗಿ ಮೂಗು ತೂರಿಸುತ್ತಾನೆ' ಎಂದು ದೂರಿದರು. ಆಗ ಕೃಷ್ಣದೇವರಾಯರು 'ರಾಮಕೃಷ್ಣನ ವಿವೇಕವನ್ನು ನಾನೀಗ ಪರೀಕ್ಷಿಸುತ್ತೇನೆ' ಎಂದು ಹೇಳಿ ತೆನಾಲಿರಾಮನನ್ನೂ ಉಪ್ಪರಿಗೆಗೆ ಕರೆದು ದೂರದಲ್ಲಿ ಧೂಳು ಆವೃತವಾಗಿದ್ದನ್ನು ಅವರಿಗೆಲ್ಲಾ ತೋರಿಸುತ್ತಾ 'ನೋಡಲ್ಲಿ, ದೂರದಲ್ಲಿ ಯಾರೋ ಹೋಗುತ್ತಿದ್ದಾರೆ. ಅವರು ಯಾರು ಎಂಬುದನ್ನು ನೀವೆಲ್ಲಾ ವಿಚಾರಿಸುವಿರಾ?' ಎಂದು ಆಜ್ಞಾಪಿಸಿದರು.

ರಾಜನಿಗೆ ವಿಷಯವನ್ನು ತೆನಾಲಿರಾಮನಿಗಿಂತ ಮೊದಲು ತಾವು ಹೇಳಬೇಕೆಂದು ಆತುರದಲ್ಲಿ ಹೊರಟ ಅವರು ಕೆಲ ಸಮಯದಲ್ಲೇ ಬಂದು 'ವಿಚಾರಿಸಿದೆವು ದೊರೆಗಳೇ, ಅವರು ರೈತರು. ಎತ್ತಿನಗಾಡಿಯಲ್ಲಿ ಸಾಲಾಗಿ ಹೋಗುತ್ತಿದ್ದಾರೆ' ಎಂದು ಹೇಳಿದರು.

ಅದಕ್ಕೆ ಮುಗುಳ್ನಕ್ಕು ರಾಯರು 'ಅವರು ಎಲ್ಲಿಗೆ ಹೋಗುತ್ತಿದ್ದಾರೆ, ವಿಚಾರಿಸಿ' ಎಂದರು. 'ಸರಿ ಮಹಾರಾಜ, ಈಗಲೇ ವಿಚಾರಿಸಿಕೊಂಡು ಬರುತ್ತೇವೆ' ಎಂದು ಮತ್ತೆ ತೆರಳಿ ಏದುಸಿರು ಬಿಡುತ್ತಾ ಬಂದು 'ರಾಜರೇ, ಅವರೆಲ್ಲಾ ರತ್ನಗಿರಿಯತ್ತ ಹೊರಟಿದ್ದಾರೆ' ಎಂದರು.

ಆಗ ರಾಯರು ಹುಬ್ಬೇರಿಸಿ 'ಹೌದೇ?